International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 11 No. 6 July-Aug 2024

# ಮಕ್ಕಳ ನ್ಯಾಯಕಾಯ್ದೆ -2015 ಮತ್ತು ಕಾನೂನು ಬದ್ಧ ದತ್ತು ವ್ಯವಸ್ಥೆ

ರಾಘವೇಂದ್ರ ಎಚ್. ಸಿ
ಸಂಶೋಧನಾ ವಿದ್ಯಾರ್ಥಿ,
ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ
**Corresponding Author:** ರಾಘವೇಂದ್ರ ಎಚ್. ಸಿ
**Email:** raghukscpcr@gmail.com
**DOI- 10.5281/zenodo.13254036**

**Abstract:**

ಮಕ್ಕಳ ನ್ಯಾಯಕಾಯ್ದೆ ೨೦೧೫ರ ಅಧ್ಯಾಯ ೮ ರಲ್ಲಿ ಪರಿಚ್ಛೇದ ೫೬(೧) ರ ಪ್ರಕಾರ ಯಾವ ಮಕ್ಕಳು ಅನಾಥರೋ ಅಥವಾ ಎಲ್ಲೋ ಬಿಟ್ಟುಹೋಗಲ್ಪಟ್ಟ ( ತ್ಯಜಿಸಲ್ಪಟ್ಟ ) ಅಥವಾ ನಿರ್ಧಿಷ್ಟಪಡಿಸಿದ ವಿಧಾನದಲ್ಲಿ ಮಕ್ಕಳನ್ನು ಅವರ ತಾಯಿ/ತಂದೆ ಅಥವಾ ಇಬ್ಬರೂ ಸೇರಿ ಪರಿತ್ಯಜಿಸುತ್ತಾರೋ ಅಂತಹ ಮಕ್ಕಳನ್ನು ಈ ಕಾಯ್ದೆಯಡಿ ನಿಯಮಗಳನ್ನು ರೂಪಿಸಿ ಮತ್ತು ಪ್ರಾಧಿಕಾರದಿಂದ ನಿಯಂತ್ರಣ ಚೌಕಟ್ಟಿನೊಳಗೆ ಕಾನೂನಿನ ನಿಯಮಗಳಿ ಬದ್ದರಾಗಿ ಮಗುವಿನ ಕೌಟುಂಬಿಕ ಹಕ್ಕನ್ನು ಖಾತ್ರಿಗೊಳಿಸಲು ದತ್ತುವನ್ನು ಬಳಸಬೇಕು. ಇದರ ಮೂಲ ಉದ್ದೇಶ ಮಕ್ಕಳಿಲ್ಲದವರಿಗೆ ಮಕ್ಕಳನ್ನು ನೀಡುವದಲ್ಲ, ಪೋಷಕತ್ವ ವಂಚಿತ ಮಕ್ಕಳಿಗೆ ತಂದೆ ತಾಯಿಯನ್ನು ಒದಗಿಸುವುದಾಗಿದೆ. ಅಂತಹ ಮಕ್ಕಳಿಗೆ ಶಾಶ್ವತವಾಗಿ ಕೌಟುಂಬಿಕ ವಾತಾವರಣ ನಿರ್ಮಿಸುವ ಉದ್ದೇಶವೇ ದತ್ತು.

**Key words:** ಪೋಷಕತ್ವ ವಂಚಿತ ಮಕ್ಕಳ ದಾಖಲೆ, ಪುನರ್ವಸತಿ, ಮಕ್ಕಳ ನ್ಯಾಯಕಾಯ್ದೆ -2015ರ ಯ ಆಶಯಗಳು, ದತ್ತು ಪ್ರಕ್ರಿಯೆ , ದತ್ತು ಮತ್ತು ಕಾನೂನುಗಳು, ಸರ್ಕಾರ ನೀಡಿರುವ ಪ್ರಾಶಸ್ತ್ಯಗಳು, ಪೋಷಕತ್ವ ವಂಚಿತ ಮಕ್ಕಳ ಶಾಶ್ವತ ಕೌಟಂಬಿಕ ವ್ಯವಸ್ಥೆ,

ಪೀಠಿಕೆ :-

"ಮಕ್ಕಳ ನ್ಯಾಯ" (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ ೨೦೧೫ ಪರಿಚ್ಛೇದ ೫೬ (೧) ಅಡಿಯಲ್ಲಿ ಮಕ್ಕಳನ್ನು ದತ್ತು ನೀಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ದತ್ತು ಮಗುವಿನ ದತ್ತಕವನ್ನು ಸಂಬAಧಿಕರಿAದ ಸಂಬAಧಿಕರಿಗೆ ಅವರು ಯಾವುದೇ ಧರ್ಮದವರಾಗಿದ್ದರೂ ಈ ಕಾಯ್ದೆಯಲ್ಲಿ ಹೇಳಿರುವಂತೆ ಮತ್ತು ಪ್ರಾಧಿಕಾರವು ದತ್ತು ನಿಯಂತ್ರಣ ಪ್ರಾಧಿಕಾರವು ನಿರ್ಮಿಸಿರುವ ನಿಯಮಗಳಿಗೆ ಅನುಗುಣವಾಗಿ ದತ್ತು ನೀಡಬಹುದು. ಹಿಂದೂ ದತ್ತಕ ಮತ್ತು ನಿರ್ವಹಣಾ ಕಾಯ್ದೆ ೧೯೫೬ (HAMA Act -೧೯೫೬) ಈ ಕಾಯ್ದೆ ಹಿಂದೂ ಹಿಂದೂಗಳ ಮಧ್ಯ ಹಾಗೂ ರಕ್ತಸಂಬAಧಗಳಲ್ಲಿ ಆಗುವ ಪರಸ್ಪರ ಒಪ್ಪಿಗೆ ಮತ್ತು ಕಾನೂನು ನಿಯಮಗಳಿಗೆ ಒಳಪಟ್ಟು ಆಗುವ ಪ್ರಕ್ರಿಯೆಯಾಗಿದೆ. ಈ ಕಾಯ್ದೆಯಡಿಯಲ್ಲಿ ನೀಡಿದ ಮಕ್ಕಳ ದತ್ತುವಿಗೆ ಈ ಕಾಯ್ದೆ ಸೂಚಿಸಿರುವ ಯಾವುದೇ ವಿಚಾರಗಳು ಅನ್ವಯವಾಗುವುದಿಲ್ಲ, ಎಲ್ಲ ಅಂತರಾಷ್ಟ್ರೀಯ ದತ್ತಕವನ್ನು ಈ ಕಾಯ್ದೆಯಲ್ಲಿ ಸೂಚಿಸಿರುವಂತೆಯೇ ಮತ್ತು ಪ್ರಾಧಿಕಾರವು ನಿರ್ಮಿಸಿರುವ ದತ್ತು ನಿಯಂತ್ರಣ ನಿಯಮಗಳಂತೆಯೇ ನೀಡಬೇಕು. ಯಾವುದೇ ವ್ಯಕ್ತಿ ವಿದೇಶದಿಂದ ಮಗುವನ್ನು ತೆಗೆದುಕೊಂಡಲ್ಲಿ ಅಥವಾ ಕಳಿಸಿದ್ದಲ್ಲಿ ಅಥವಾ ನ್ಯಾಯಾಲಯದ ಸೂಕ್ತ ಆದೇಶವಿಲ್ಲದೆ ಮಗುವನ್ನು ಪೋಷಣೆ ಮತ್ತು ಸುಪರ್ದಿಯನ್ನು ಪರ ರಾಷ್ಟ್ರದ ವ್ಯಕ್ತಿಗೆ ವರ್ಗಾಯಿಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಲ್ಲಿ ಈ ಕಾಯ್ದೆ ಸೆಕ್ಷನ್ ೮೦ ಅಡಿಯಲ್ಲಿ ದಂಡನಿಗೆ ಗುರಿಯಾಗಬೇಕಾಗುತ್ತದೆ.

ಉದ್ದೇಶಗಳು

ಪೋಷಕತ್ವ ವಂಚಿತ ಮಕ್ಕಳಿಗೆ ಸರ್ಕಾರ ನೀಡಿರುವ ಪ್ರಾಶಸ್ತ್ಯಗಳು

ವ್ಯಾಪ್ತಿ ಮತ್ತು ಮಿತಿಗಳು

ಈ ಅಧ್ಯಯನವು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪೋಷಕತ್ವ ವಂಚಿತ ಮಕ್ಕಳಿಗೆ ಸರ್ಕಾರ ನೀಡಿರುವ ಪ್ರಾಶಸ್ತ್ಯಗಳು ಒಳಗೊಂಡಿದೆ. ಈ ಅಧ್ಯಯನವು ಸರ್ಕಾರ ಮತ್ತು ಸರ್ಕಾರೇತರ ಸಾಂಸ್ಥಿಕ ವ್ಯವಸ್ಥೆಯಲ್ಲಿನ ಪುನರ್ವಸತಿ ಪಡೆದ ಮಕ್ಕಳಿಗೆ ಸಂಬಂಧಿಸಿದ್ದಾಗಿದೆ.

ವಿಧಾನ :- ಈ ಅಧ್ಯಯನದಲ್ಲಿ ಸಾಂಘಿಕ ಮತ್ತು ಅನುಸಾಂಘಿಕ ವಿಧಾನದ ಜೊತೆಗೆ ಸ್ನೋಬಾಲ್ ವಿಧಾನವನ್ನು ಬಳಸಲಾಗಿದೆ.

ಸಂಭವನೀಯ ಮತ್ತು ದತ್ತು ಪೋಷಕರಾಗಲು ಇರಬೇಕಾದ ಅರ್ಹತೆಗಳು

ಪೋಷಕರಮೇಲೆ ಯಾವುದೇ ಗಂಭೀರವಾದ ಕ್ರಿಮಿನಲ್ ಪ್ರಕರಣಗಳು ಇರಬಾರದುಪೋಷಕರು ದಿವಾಳಿಯಾಗಿರಬಾರದು. ದತ್ತು ಪೋಷಕರಾಗುವವರು ದೈಹಿಕವಾಗಿ ಸದೃಢರಾಗಿರಬೇಕು. ಆರ್ಥಿಕ ಅನುಕೂಲತೆ, ಮಾನಸಿಕ ಸಿದ್ಧತೆ ಹಾಗೂ ಮಗುವಿಗೆ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ಉನ್ನತ ಮನೋಭಾವ ಹೊಂದಿರಬೇಕು. ದAಪತಿಗಳಾಗಿದ್ದಲ್ಲಿ ಇಬ್ಬರ ಒಪ್ಪಿಗೆಯು ದತ್ತು ತೆಗೆದುಕೊಳ್ಳಲು ಒಪ್ಪಿಗೆಯೂ ಅವಶ್ಯವಾಗಿರುತ್ತದೆ. ಎಲ್ಲಾ ಮಾನದಂಡಗಳನ್ನು ಪೂರೈಸಿದ ಮತ್ತು ಪ್ರಾಧಿಕಾರವು ರೂಪಿಸಿದ ದತ್ತು ನಿಯಂತ್ರಣ ನಿಯಮಗಳಿಗೆ ವಿವಾಹ ವಿಚ್ಛೇದಿತ ವ್ಯಕ್ತಿಗಳು ಸಹ ದತ್ತು ಪಡೆಯಬಹುದು. ಏಕ ಪುರುಷರು ಇದ್ದಲ್ಲಿ ಹೆಣ್ಣು ಮಗುವನ್ನು ದತ್ತು ಪಡೆಯಲು ಅವಕಾಶವಿರುವುದಿಲ್ಲ. ಪ್ರಾಧಿಕಾರ ರೂಪಿಸಬಹುದಾದ ಇನ್ನಿತ್ತರ ಯಾವುದೇ ನಿರ್ಧಿಷ್ಟ ದತ್ತು ನಿಯಂತ್ರಣ ಮಾನದಂಡಗಳನ್ನು ಪಾಲಿಸತಕ್ಕದ್ದು ಮಕ್ಕಳ ರಕ್ಷಣೆ ಮತ್ತು ಪೋಷಣೆ ಮಾಡುವಲ್ಲಿ ಸಾಮರ್ಥ್ಯಹೊಂದಿರಬೇಕು.

ಪ್ರಸ್ತುತ ಚಾಲ್ತಿಯಲ್ಲಿರುವ ದತ್ತು ಸಂಬAಧಿಸಿದ ಕಾನುನುಗಳು

1.ಮಕ್ಕಳ ನ್ಯಾಯ ಕಾಯ್ದೆ (ಮಕ್ಕಳ ಪೋಷಣೆ ಮತ್ತು ರಕ್ಷಣೆ)- 2015

2.ಅಧಿನಿಯಮ ೨೦೧೫ ಹಾಗೂ ಮಾದರಿ ನಿಯಮಗಳು ೨೦೧೬

3.ದತ್ತು ಅಧಿಸೂಚನೆ ೨೦೧೭

4.ಹಿಂದು ದತ್ತಕ ನಿರ್ವಹಣಾ ಕಾಯ್ದೆ ೧೯೫೬

ಮೇಲ್ಕಂಡ ಕಾಯ್ದೆಗಳನ್ನು ಹೊರತುಪಡಿಸಿ ಇನ್ನೂ ಯಾವುದೇ ನಿಯಮದಡಿ ಮಗುವನ್ನು ದತ್ತು ನೀಡುವಹಾಗಿಲ್ಲ.

ಬಾಲನ್ಯಾಯ ಕಾಯ್ದೆ ೨೦೧೫ ಪ್ರಕಾರ ದತ್ತುಗೆ ಅರ್ಹವಿರುವ ಮಗು

ಪರಿತ್ಯಕ್ತ ಮಗು ಅಥವಾ ಪೋಷಕರಿಂದ ತಿರಸ್ಕೃತ ಮಗು, ಸಂಬAಧಿಕರಿAದ ಅಥವಾ ಸ್ಥಳೀಯರಿಂದ ಒಪ್ಪಿಸಲ್ಪಟ್ಟ ಮಗು ಅಥವಾ ಅನಾಥ ಮಗು ಅಥವಾ ಪೋಷಕರಿಂದ ವಂಚಿತ ಮಗು ಈ ಮಕ್ಕಳು ಕಲ್ಯಾಣ ಸಮಿತಿಯಿಂದ ಕಾನೂನುನಿಂದ ಮುಕ್ತ ಆದೇಶ ಪಡೆದ ನಂತರ ದತ್ತು ನೀಡಲು ಅರ್ಹವಾಗಿರುತ್ತಾರೆ.

ದತ್ತು ಕಾರ್ಯಕ್ರಮ –ಕಾನೂನು ಪ್ರಕ್ರಿಯೆ

ಮಗು ಹಾಗೂ ಜೈವಿಕ ಪೋಷಕರ ನಡುವಿನ ಸಂಬAಧವನ್ನು ಕಾನೂನು ಬದ್ದವಾಗಿ ಕೊನೆಗಾಣಿಸಿ ಮಗು ಮತ್ತು ದತ್ತು ಪೋಷಕರ ನಡುವಿನ ಸಂಬAಧವನ್ನು ಶಾಶ್ವತವಾಗಿ ಬಲಪಡಿಸುವ ಕಾನೂನು ಬದ್ದ ಪ್ರಕ್ರಿಯೆ , ನ್ಯಾಯಾಲಯದಿಂದ ದತ್ತು ಆದೇಶ ಪಡೆದ ನಂತರ ದತ್ತು ಪಡೆದ ಮಗು ದತ್ತು ಪೋಷಕರಿಗೆ ಕಾನೂನು ಬದ್ದ ಮಗುವಾಗಿ ಮಾರ್ಪಡುತ್ತದೆ. ಜೈವಿಕ ಮಗು ಹೊಂದಿರುವAತಹ ಎಲ್ಲಾ ಹಕ್ಕುಗಳು ಮತ್ತು ಜವಬ್ದಾರಿ ಹಾಗೂ ಸವಲತ್ತುಗಳನ್ನು ದತ್ತು ಮಗು ಕೂಡ ಹೊಂದಿರುತ್ತದೆ.

ಹಿಂದು ದತ್ತಕ ನಿರ್ವಹಣಾ ಕಾಯ್ದೆ ೧೯೫೬

ಹಿಂದುಗಳಿಗೆ ಮಾತ್ರ ಅನ್ವಯವಾಗುತ್ತದೆ. ಒಂದೇ ಲಿಂಗದ ಮಗುವನ್ನು ದತ್ತು ಪಡೆಯಲು ಅವಕಾಶವಿಲ್ಲ, ಈಗಾಗಲೇ ಹೆಣ್ಣು/ಗಂಡು ಮಗುವನ್ನು ಹೊಂದಿದ್ದರೆ ಪುನಃ ಅದೇ ಲಿಂಗದ ಮಗುವನ್ನು ದತ್ತು ಪಡೆಯಲು ಅವಕಾಶವಿರುವುದಿಲ್ಲ. ಪೋಷಕರಿಂದ ಅಥವಾ ಕಾನೂನು ಬದ್ದ ಪೋಷಕರಿಂದ ಮಾತ್ರ ದತ್ತು ನೀಡಲು ಅವಕಾಶವಿರುತ್ತದೆ.

ಬಾಲನ್ಯಾಯ ಕಾಯ್ದೆ೨೦೧೫ರ ಅನ್ವಯ ದತ್ತು ಕಾರ್ಯಕ್ರಮದ ಪ್ರಮುಖ ಅಂಶಗಳು

ಪರಿತ್ಯಕ್ತ . ಒಪ್ಪಿಸಲ್ಪಟ್ಟ ಹಾಗೂ ಮಕ್ಕಳನ್ನು ಕುಟುಂಬಕ್ಕೆ ಮರಳಿಸುವ ಪ್ರಯತ್ನ , ಪರಿತ್ಯಪ್ತ ಅಥವಾ ಅನಾಥ ಮಕ್ಕಳ ಜೈವಿಕ ಪೋಷಕರನ್ನು ಪತ್ತೆ ಹಚ್ಚಲು ಎಲ್ಲಾ ಪ್ರಯತ್ನಗಳನ್ನು ಮಾಡಿ, ಪೋಷಕರು ಪತ್ತೆಯಾದಲ್ಲಿ ಒಪ್ಪಿಸಲಾಗುವುದು. ಅದೇ ರೀತಿ ಮಗುವನ್ನು ಒಪ್ಪಿಸಿದ ಪೋಷಕರಿಗೆ ದತ್ತು ಕಾರ್ಯಕ್ರಮದ ಪರಿಣಾಮಗಳ ಕುರಿತು ಆಪ್ತ ಸಮಾಲೋಚನೆಯನ್ನು ಮಾಡಿ ಪೋಷಕರು ಇಚ್ಚೆ ಪಟ್ಟಲ್ಲಿ ಮಗುವನ್ನು ಒಪ್ಪಿಸಲಾಗುವುದು.

ಬಾಲನ್ಯಾಯ ಕಾಯ್ದೆ ೨೦೧೫ರ ಅನ್ವಯ ದತ್ತು ಕಾರ್ಯಕ್ರಮದ ಪ್ರಮುಖ ಅಂಶಗಳು

ಯಾವುದೇ ಧರ್ಮದವರಾದರೂ ಕೂಡ ಈ ಕಾಯ್ದೆಯಡಿ ದತ್ತು ಪಡೆಯಲು ಅರ್ಹರಾಗಿರುತ್ತಾರೆ. (ಸೆಕ್ಷನ್ ೫೮(೧) ಪೋಷಕರ ವಯಸ್ಸಿನ ಆಧಾರದ ಮೇರೆಗೆ, ೧೮ ವರ್ಷದೊಳಗಿನ ಮಕ್ಕಳನ್ನು ದತ್ತು ನೀಡಬಹುದಾಗಿದೆ. ಸೆಕ್ಷನ್ ೨(೧೨) ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆದು (ಸೆಕ್ಷನ್ ೩೮ ಮತ್ತು ಸೆಕ್ಷನ್ ೬,೭ ದತ್ತು ಅಧಿಸೂಚನೆ) ಅನಾಥ, ಪರಿತ್ಯಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳನ್ನು (ಸೆಕ್ಷನ್ ೫೬(೧) ರ ಅನ್ವಯ ಸ್ವದೇಶಿ ಹಾಗೂ ವಿದೇಶಗಳಿಗೆ ದತ್ತು ನೀಡಲು ಅವಕಾಶವಿರುತ್ತದೆ. ಆನ್ ಲೈನ್ ಮೂಲಕ ದತ್ತು ಪೋಷಕರ ನೋಂದಣೆ ಮತ್ತು ದತ್ತು ಲಭ್ಯವಿರುವ ಮಕ್ಕಳ ಮಾಹಿತಿಯನ್ನು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ( CARA) ನಿರ್ವಹಿಸುತ್ತದೆ. ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು ದತ್ತು ಪ್ರಕ್ರಿಯೆಯ ಎಲ್ಲಾ ಹಂತಗಳಿಗೂ ಕಾಲಮಿತಿ ನೀಡಿದೆ. ದತ್ತು ಪ್ರಕ್ರಿಯೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಮುಖ ಪಾತ್ರವನ್ನು ವಹಿಸಿದ್ದು,

ಅವರು ವಿಶೇಷ ದತ್ತು ಸಂಸ್ಥೆಯಲ್ಲಿ ನಡೆಯುವ ದತ್ತು ಸಭೆಯ ಸದಸ್ಯರಾಗಿರುತ್ತಾರೆ.

ಬಾಲನ್ಯಾಯ ಕಾಯ್ದೆ ೨೦೧೫ರ ಅನ್ವಯ ಕಾನೂನು ಉಲ್ಲಂಘಿಸಿದ್ದಲ್ಲಿ – ದಂಡ ಪ್ರಕ್ರಿಯೆ

ಅನಾಥ, ಪರಿತ್ಯಕ್ತ , ಒಪ್ಪಿಸಲ್ಪಟ್ಟ ಮಕ್ಕಳನ್ನು ನೇರವಾಗಿ ಸಂಬAಧಿಸದ ಪೋಷಕರಿಗೆ ಅಥವಾ ಕುಟುಂಬಕ್ಕೆ ಹಸ್ತಾಂತರಿಸುವುದು ಕಾನೂನಿನ ಉಲ್ಲಂಘನೆಯಾಗಿರುತ್ತದೆ. ಬಾಲನ್ಯಾಯ ಕಾಯ್ದೆ ೨೦೧೫ರ ಸೆ್ಕ್ಷನ್ ೮೦ ಮತ್ತು ೮೧ ಅನ್ವಯ ಅಪರಾಧವಾಗಿದ್ದು ೧ ಲಕ್ಷ ದಂಡ ಹಾಗೂ ೫ ವರ್ಷಗಳ ವರಗೆ ಜೈಲುವಾಸ ವಿಸ್ತಿರಿಸಬಹುದಾಗಿದೆ.

ದತ್ತು ಪ್ರಕ್ರಿಯೆಗೆ ಸಂಬAಧಿಸಿದ ಸಂಸ್ಥೆಗಳು

೧. ಕೇAದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA)
೨. ರಾಜ್ಯ ದತ್ತು ಸಂಪನ್ಮೂಲ ಪ್ರಾಧಿಕಾರ (SARA)
೩. ಮಕ್ಕಳ ಕಲ್ಯಾಣ ಸಮಿತಿ (CWC)
೪. ಜಿಲ್ಲಾ ಮಕ್ಕಳ ರಕ್ಷಣಾ ಘಟಕ (DCPU)
೫. ವಿಶೇಷ್ ದತ್ತು ಸಂಸ್ಥೆ
೬. ನ್ಯಾಯಾಲಯ / ಹಾಲಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು
೭. ಜನನ ನೋಂದಣಿ ಪ್ರಾಧಿಕಾರ

ಭಾರತೀಯ ದತ್ತು ಪೋಷಕರು ಮಗುವನ್ನು ದತ್ತು ಪಡೆಯಲು ನಿಗಧಿಪಡಿಸಿದ ಕಲಾವಧಿ

ಪ್ರಾರಂಭದಲ್ಲಿ ದತ್ತು ಪೋಷಕರಿಂದ ಕೇರಿಂಗ್ಸ್ ವೆಬ್ ಸೈಟ್‌ನಲ್ಲಿ ನೋಂದಣಿ ಮಾಡಬೇಕು. ಕೇರಿಂಗ್ಸ್ ವೆಬ್‌ಸೈಟ್‌ನಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಅಪ್ ಪೋಡ್ ಮಾಡುವುದು. ನಂತರ ಗೃಹ ಅಧ್ಯಯನ ಸಿದ್ದಪಡಿಸಲು ದತ್ತು ಪೋಷಕರಿಂದ ವಿಶೇಷ ದತ್ತು ಕೇಂದ್ರದ ಆಯ್ಕೆಮಾಡಿಕೊಳ್ಳುತ್ತದೆ. ನಂತರ ವಿಶೇಷ ದತ್ತು ಕೇಂದ್ರದವರು ಗೃಹ ಅಧ್ಯಯನ ವರದಿ ಸಿದ್ದಪಡಿಸಿ ಕೇರಿಂಗ್ಸ್ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡುವುದು. ಈ ಎಲ್ಲ ಪ್ರಕ್ರಿಯೆಗಳನ್ನು ೩೦ ದಿನದ ಒಳಗಾಗಿ ಪೂರ್ಣಗೊಳಿಸಬೇಕು. ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದಿಂದ ದತ್ತು ಪೋಷಕರಿಗೆ ಕೇರಿಂಗ್ ವೆಬ್‌ಸೈಟ್‌ನಲ್ಲಿ ಮಗುವನ್ನು ಮ್ಯಾಚ್ ಮಾಡುವುದು. ದತ್ತು ಪೋಷಕರು ಕೇರಿಂಗ್ಸ್ ವೆಬ್‌ಸೈಟ್‌ನಲ್ಲಿ ಮಗುವನ್ನು ಕಾಯ್ದಿರಿಸುವುದು. ಸಂಬAಧಪಟ್ಟ ವಿಶೇಷ ದತ್ತು ಕೇಂದ್ರಕ್ಕೆ ದತ್ತು ಪೋಷಕರ ಭೇಟಿ ಹಾಗೂ ಸಮಿತಿಯ ಮುಂದೆ ಮಗುವಿನ ಅಂಗೀಕಾರವಾಗುತ್ತದೆ. ದತ್ತು ಪೋಷಕರು ಮಗುವನ್ನು ದತ್ತು ಪೂರ್ವ ಪೋಷಕತ್ವ ಪಡೆಯುವ ಪ್ರಕ್ರಿಯೆ ಅಂತ್ಯವಾಗುತ್ತದೆ.

ನಂತರ ಆರಂಭವಾಗುವುದು ದತ್ತು ಪಡೆದುಕೊಳ್ಳುವ ಪೋಷಕರು ಒಪ್ಪಿಗೆ ನೀಡುತ್ತಾರೆ. ನಂತರ ಈ ಎಲ್ಲ ಪ್ರಕ್ರಿಯೆಗಳನ್ನು ೧೦ ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು. ಪೋಷಕರು ದತ್ತು ಪೂರ್ವ ಪೋಷಕತ್ವವಕ್ಕೆ ಮಗುವನ್ನು ಸುಪರ್ಧಿಗೆ ಪಡೆಯುವುದು. ವಿಶೇಷ ದತ್ತು ಕೇಂದ್ರದವರಿAದ ಸಂಬಂಧಪಟ್ಟ ನ್ಯಾಯಾಲಯದಲ್ಲಿ ದತ್ತು ಮನವಿ ಸಲ್ಲಿಕೆ ಯಾಗುತ್ತದೆ. ಈ ಎಲ್ಲ ಪ್ರಕ್ರಿಯೆಗಳನ್ನು ೨೦ ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು. ನಂತರ ನ್ಯಾಯಾಲಯದಲ್ಲಿ ಇನ್ ಕ್ಯಾಮರಾ ಮುಂದೆ ಪ್ರಕರಣ ವಿಚಾರಣೆ ಹಾಗೂ ವಿಲೇವಾರಿಯಾಗುತ್ತದೆ. ಸ್ಕೂಟನಿ ಏಜನ್ಸಿಯ ಮುಖಾಂತರ ದಾಖಲಾತಿಗಳ ಪರಿಶೀಲನೆಯಾಗುತ್ತದೆ. ವಿಶೇಷ ದತ್ತು ಕೇಂದ್ರದವರು ದತ್ತು ಆದೇಶದ ಪ್ರತಿಯನ್ನು ದತ್ತು ಪೋಷಕರಿಗೆ ಕಳಿಸುತ್ತಾರೆ.ಈ ಎಲ್ಲಾ ಪ್ರಕ್ರಿಯೆಗಳನ್ನು ೦೩ ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು, ನಂತರ ವಿಶೇಷ ದತ್ತು ಕೇಂದ್ರದವರು ದತ್ತು ಆದೇಶವನ್ನು ಕೇರಿಂಗ್ಸ್ ವೆಬ್‌ನಲ್ಲಿ ಅಪ್ ಲೋಡ್ ಮಾಡುವುದು, ಪ್ರತಿಯನ್ನು ದತ್ತು ಪೋಷಕರಿಗೆ ಕಳಿಸುವುದು. ವಿಶೇಷ ದತ್ತು ಕೇಂದ್ರದವರು ಸಂಬಂಧಪಟ್ಟ ಪ್ರಾಧಿಕಾದಿಂದ ಜನನ ಪ್ರಮಾಣ ಪತ್ರವನ್ನು ಪಡೆಯುವುದು. ವಿಶೇಷ ದತ್ತು ಕೇಂದ್ರದವರು ಜನನ ಪ್ರಮಾಣ ಪತ್ರವನ್ನು ದತ್ತು ಪೋಷಕರಿಗೆ ಕಳಿಸುವುದರ ಮೂಲಕ ದತ್ತು ಪ್ರಕ್ರಿಯೆ ಅಂತ್ಯವಾಗುತ್ತದೆ.

ದತ್ತು ನೀಡುವ ಮಕ್ಕಳು ಎಲ್ಲಿದ್ದಾರೆ ?

೧.ಈ ಅಂತರವು ಈಗಾಗಲೇ ಅಕ್ರಮವಾಗಿ ನಡೆಯುತ್ತಿರುವ ಮಕ್ಕಳ ಮಾರಾಟದ ಕಾಳ ಸಂತೆಗೆ ಉತ್ತೇಸುವಂತಿದೆ.

೨.ಅಂದಾಜಿಸಿರುವAತೆ ದೇಶದಲ್ಲಿ ೧೯೯೧ ಮಕ್ಕಳು ದತ್ತು ನೀಡಲು ಲಭ್ಯವಿದ್ದರೆ, ೨೦೦೦೦ ಪೋಷಕರು ಮಕ್ಕಳನ್ನು ಕಾನೂನು ಬದ್ದವಾಗಿ ದತ್ತು ಪಡೆಯಲು ನೋಂದಾಯಿಸಿದ್ದು ಅಗಾಧವಾದ ಅಂತರವನ್ನು ಗಮನಿಸಬಹುದಾಗಿದೆ.

೩.ಕೆಲವೊಂದು ಪ್ರಕರಣಗಳಲ್ಲಿ ಜೈವಿಕ ಪೋಷಕರು ಆಸ್ಪತ್ರೆಗಳಲ್ಲಿ ತ್ಯಜಿಸಿ ಹೋದ ಮಕ್ಕಳನ್ನು ನೇರವಾಗಿ ದತ್ತು ಪಡೆಯಲು ಇಚ್ಚಿಸಿರುವ ಪೋಷಕರಿಗೆ ನೀಡಿದ್ದಾರೆ.

೪.ಕೆಲವೊಂದು ಪ್ರಕರಣಗಳಲ್ಲಿ ಮಗುವಾದ ಕೂಡಲೇ ಒಪ್ಪಿಸಲು ಇಚ್ಚಿಸುವ ತಾಯಂದಿರರನ್ನು ನರ್ಸಿಂಗ್ ಹೋಮ್‌ಗಳು ನೇರವಾಗಿ ದತ್ತು ಪಡೆಯಲು ಇಚ್ಚಿಸುವ ಪೋಷಕರಿಗೆ ನೇರವಾಗಿ ಸಂಪರ್ಕ ಕಲ್ಪಿಸುತ್ತಾರೆ.

೫.ಮೈಸೂರುನಲ್ಲಿ ಇತ್ತೀಚಗೆ ೧೬ ಮಕ್ಕಳ ಮಾರಾಟದ ಪ್ರಕರಣವು ಪ್ರಸೂತಿ ಗೃಹಗಳ ಸಿಬ್ಬಂಧಿಯಿAದಲೇ ಆಗಿದ್ದು, ಇದು ಮಕ್ಕಳು ಮತ್ತು ಪೋಷಕರನ್ನು ಮಾನಸಿಕವಾಗಿ ತೀವ್ರವಾಗಿ ಘಾಸಿಗೊಳಿಸಿದೆ.

೬.ದತ್ತು ಪಡೆಯಲು ಆಸಕ್ತಿ ಇರುವ ಪೋಷಕರು, ಆಗತಾನೆ ಹುಟ್ಟಿದ ತಮ್ಮ ಮಕ್ಕಳನ್ನು ದತ್ತು ನೀಡಲು ಬಯಸುವ ಪೋಷಕರ

ಬಗ್ಗೆ ಮಾಹಿತಿ ನೀಡುವಂತೆ ನರ್ಸಿಂಗ್ ಹೋಮ್ ಆಸ್ಪತ್ರೆಗಳು ಮತ್ತು ವೈದ್ಯರನ್ನು ಸಂಪರ್ಕಿಸುತ್ತಿರುವುದು ಕಂಡುಬAದಿದೆ.

ಅಕ್ರಮ ದತ್ತು ಎಂದರೇನು ?

೧.ಮಕ್ಕಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡುವುದು

೨.ಮೋಸದ ಮೂಲಕ ಮಕ್ಕಳನ್ನು ದತ್ತು ಪಡೆಯಲು ಪ್ರಯತ್ನಿಸುವುದು

೩.ಮಕ್ಕಳನ್ನು ಮಾರಾಟ ಮಾಡುವುದು

೪.ಹಣದ ಆಮಿಷವೊಡ್ಡಿ ಹಾಗೂ ಜೈವಿಕ ಪೋಷಕರ ಸಂಪೂರ್ಣ ಒಪ್ಪಿಗೆಯನ್ನು ಪಡೆಯದೆ ಅಕ್ರಮವಾಗಿ ವ್ಯವಹರಿಸುವುದು ಕಾನೂನಿ ವಿರುದ್ಧ ಕ್ರಮಗಳಾಗಿವೆ.

೫.ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿಕೊಳ್ಳುವುದು ಮತ್ತು ಮೋಸಗೊಳಿಸುವುದು

ಅಕ್ರಮ ದತ್ತು ಪರಿಣಾಮಗಳು

೧.ಮಗು ಮತ್ತು ಪೋಷಕರ ನಡುವಿನ ಸಂಬAಧ ಕಾನೂನು ಬದ್ಧವಾಗಿರುವುದಿಲ್ಲ, ಇದರಿಂದ ಮಗುವಿಗೆ ಅತ್ಯಗತ್ಯವಾಗಿ ದೊರಕಬೇಕಾದ ಆಸ್ತಿ ಮತ್ತು ವಂಶಪಾರAಪರ್ಯ ಹಕ್ಕುಗಳು ದೊರೆಯುವುದಿಲ್ಲ ಇದು ಈ ಮೂಲಭೂತ ಹಕ್ಕುಗಳ ಉಲ್ಲಂಘನೆ.

೨.ಅಕ್ರಮ ದತ್ತು ರಹಸ್ಯಾತ್ಮಕವಾಗಿ ನಡೆಯುವುದರಿಂದ ಮಕ್ಕಳ ಒಳಮನಸ್ಸಿಗೆ ದತ್ತು ಪೋಷಕರು ಏನನ್ನೋ ತಮ್ಮಂದಿ ಮರೆಮಾಚುತ್ತಿದ್ದಾರೆಂದು ಸದಾ ಮಕ್ಕಳಿಗೆ ಅನಿಸುತ್ತಿರುತ್ತದೆ. ಇದು ಅವರ ವರ್ತನೆಗಳಲ್ಲಿ ಪದೇ ಪದೇ ಮರುಕಳಿಸುತ್ತದೆ ಎಂಬುದಾಗಿ ಮನಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

೩.ಕುಟುಂಬದಿAದ ಅಕ್ರಮವಾಗಿ ದತ್ತು ಪಡೆದ ಮಗುವಿನಲ್ಲಿ ಮುಂದೆ ಬೆಳವಣಿಗೆಯ ದೋಷಗಳು ಕಂಡುಬಂದು ವಿಶೇಷ ಅಗತ್ಯವಿರುವ ಮಕ್ಕಳಾದರೆ ಮಗುವನ್ನು ಪರಿತ್ಯಜಿಸುವ ಸಾಧ್ಯತೆ ಇರುತ್ತದೆ.

೪.ದತ್ತು ಪೋಷಕರು , ಜೈವಿಕ ಪೋಷಕರು/ಮಧ್ಯವರ್ತಿಗಳು ಯಾವಾಗ ಬಂದು ಮಗುವನ್ನು ಕೇಳುತ್ತಾರೋ ಎಂಬ ಭಯದಲ್ಲಿ ಸದಾ ಬದುಕುತ್ತಿರುತ್ತಾರೆ ಜೊತೆಗೆ ಆತಂಕ ವಿರುತ್ತದೆ.

೫.ಮಕ್ಕಳಿಗೆ ತಾವು ಪರಿತ್ಯಸಿದ/ ಮಾರಾಟಗೊಂಡ ಮಗು ಎಂದು ತಿಳಾಇದಾಗ ಅವರು ಮಾನಸಿಕವಾಗಿ ಮತ್ತು ಭಾವಾನಾತ್ಮಕವಾಗಿ ಸಾಕಷ್ಟು ಯಾತನೆ ಅನುಭವಿಸುತ್ತಾರೆ.

೬.ತಾಯಿಯ ಹಕ್ಕುನ್ನು ನಿರಾಕರಿಸಿದಂತಾಗುತ್ತದೆ.

೭.ಅಕ್ರಮವಾಗಿ ಮಕ್ಕಳನ್ನು ಮಾರಾಟ ಮಾಡುವುದು ಹೆಚ್ಚಾಗುವುದರಿಂದ ಕಾನೂನು ಬದ್ದವಾಗಿ ದತ್ತು ಪಡೆಯಲು ನೋಂದಾಯಿಸಿ ವರ್ಷಗಟ್ಟಲೆ ಕಾಯುವ ದಂಪತಿಗಳಿಗೆ ಮೋಸಮಾಡಿದಂತಾಗುತ್ತದೆ.

ಅಕ್ರಮ ದತ್ತು ತಡೆಗಟ್ಟುವ ವಿಧಾನಗಳು

೧.ಮಾಹಿತಿ ನೀಡುವ ಮೂಲಕ ಅರಿವು ಮೂಡಿಸುವುದು

೨.ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಹಾಗೂ ಜಾಹಿರಾತು ನೀಡಬೇಕು.

೩.ದತ್ತು ಕಾರ್ಯಕ್ರಮ ಪ್ರಕ್ರಿಯೆ ಮತ್ತು ಕಾನೂನುನಲ್ಲಿರುವ ಅವಕಾಶಗಳು ಕುರಿತು ಎಲ್ಲಾ ಆಸ್ಪತ್ರೆಗಳ ಸಿಬ್ಬಂಧಿಗಳಿಗೆ ಮತ್ತು ಕ್ಲಿನಿಕ್ ಹಾಗೂ ನರ್ಸಿಂಗ್ ಹೋಮ್‌ಗಳಿಗೆ ತಿಳಿಸಬೇಕು.

೪.ದತ್ತು ಕಾರ್ಯಕ್ರಮ ಕುರಿತು ಕರಪತ್ರಗಳನ್ನು ಸ್ವಾಗತ ಸ್ಥಳಗಳಲ್ಲಿ ಇರಿಸುವುದು

೫.ಅಕ್ರಮ ದತ್ತು ಅಪರಾಧ ಎಂಬ ಕುರಿತು ಕಛೇರಿ ಫಲಕಗಳನ್ನು ಅಳವಡಿಸುವುದು

೬.ನರ್ಸಿಂಗ್ ಹೋಮ್/ ಆಸ್ಪತ್ರೆ / ಸ್ವಾಗತ ಕೇಂದ್ರಗಳಲ್ಲಿ ದತ್ತು ಸಂಸ್ಥೆಯ ವಿವರ ಹಾಗೂ ಮಕ್ಕಳ ಸಹಾಯವಾಣಿ ೧೦೯೮ ಪ್ರದರ್ಶಿಸಬೇಕು.

೭.ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮೊಬೈಲ್ ನಂಬರ್ ಪ್ರದರ್ಶಿಸಬೇಕು.

೮.ಆಪ್ತ ಸಮಾಲೋಚಕರ ಮಾಹಿತಿಯನ್ನು ಮತ್ತು ಸಂಪರ್ಕಿಸುವ ವಿಳಾಸ ಮೊಬೈಲ್ ನಂಬರ್ ಎಲ್ಲಡೆ ಪ್ರಚುರ ಪಡಿಸಬೇಕು.

ಅಕ್ರಮ ದತ್ತು ಕುರಿತು ಕಾನೂನಿನ ಕ್ರಮಗಳು

ಅಕ್ರಮ ದತ್ತು ಪಡೆದುಕೊಂಡಲ್ಲಿ ಈ ಅಪರಾಧಕ್ಕೆ ಅಪರಾಧದ ವಿವರ ಶಿಕ್ಷೆ ಮತ್ತು ದಂಡ ವಿಧಿಸಬಹುದು.

೦೧.ಕಾನೂನು ಬಾಹಿರವಾಗಿ ಯಾವುದೇ ಅನಾಥ, ಪರಿತ್ಯಪ್ತ/ಒಪ್ಪಿಸಲ್ಪಟ್ಟ ಮಗುವನ್ನು ವ್ಯಕ್ತಿಯಿಂದಾಗಲಿ ಅಥವಾ ಸಂಸ್ಥೆಯಿಂದಾಗಲಿ ದತ್ತು ಉದ್ದೇಶಕ್ಕಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ ಮಗುವನ್ನು ಮಾರಾಟ ಮಾಡುವುದು ಮತ್ತು ಕೊಳ್ಳುವುದು ಬಾಲನ್ಯಾಯ ಕಾಯ್ದೆ ೨೦೧೫ ಸೆಕ್ಷನ್ ೮೦ ಪ್ರಕಾರ ಅಪರಾಧವಾಗಿದೆ.೩ವರ್ಷ ಜೈಲುವಾಸ ೧ ಲಕ್ಷ ದಂಡ ವಿಧಸಲು ಕಾನೂನುನಲ್ಲಿ ಅವಕಾಶ ಕಲ್ಪಿಸಲಾಗಿದೆ.

೦೨.ಯಾವುದೇ ಆಸ್ಪತ್ರೆ ಸಿಬ್ಬಂಧಿಗಳು, ನರ್ಸಿಂಗ್ ಹೋಮ್‌ಗಳು ಮತ್ತು ಪ್ರಸೂತಿ ಗೃಹಗಳು ತಮ್ಮ ಅಧೀನದಲ್ಲಿರುವ ಮಗುವನ್ನು ಯಾವುದೇ ಉದ್ದೇಶದಿಂದ ಮಾರಾಟ ಮಾಡುವ ಕಾರ್ಯದಲ್ಲಿ ಭಾಗಿಯಾದರೆ ಬಾಲನ್ಯಾಯ ಕಾಯ್ದೆ ಸೆಕ್ಷನ್ ೮೧ ರ ಪ್ರಕಾರ ಅಪರಾಧವಾಗುತ್ತದೆ. ಈ ಅಪರಾಧಕ್ಕೆ ೩-೭ ವರ್ಷ ಜೈಲುವಾಸ ೧ ಲಕ್ಷ ದಂಡ ವಿಧಿಸಬಹುದಾಗಿದೆ.

೦೩.ನ್ಯಾಯಾಲಯದಿಂದ ದತ್ತು ಆದೇಶ ಪಡಿಯದೇ ಯಾವುದೇ ಮಗುವನ್ನು ವಿದೇಶಕ್ಕೆ ಪಡೆಯುವ ಅಥವಾ ವಿದೇಶಕ್ಕೆ ಮಗುವನ್ನು ಕಳಿಸುವ ಕಾರ್ಯದಲ್ಲಿ ತೊಡಗಿದರೆ ಬಾಲನ್ಯಾಯ ಕಾಯ್ದೆ ೨೦೧೫ ಸೆಕ್ಷನ್ ೫೦(೫) ಸೆಕ್ಷನ್ ೮೦ ಪ್ರಕಾರ

ಅಪರಾಧವಾಗುತ್ತದೆ. ಈ ಅಪರಾಧಕ್ಕೆ ೩ವರ್ಷ ಜೈಲುವಾಸ ೧ ಲಕ್ಷ ದಂಡ ವಿಧಿಸಬಹುದಾಗಿದೆ.

೦೪.ಪೋಷಣೆ ಮತ್ತು ರಕ್ಷಣೆ ಅವಶ್ಯಕತೆಯಿರುವ ಮಕ್ಕಳು ಪೋಷಕರಿಂದ ಪ್ರತ್ಯೇಕವಾಗಿದೆಂದು ಕಂಡುಬಂದಾಗ ವರದಿ ಮಾಡದಿದ್ದರೆ, ಬಾಲನ್ಯಾಯ ಕಾಯ್ದೆ ೨೦೧೫ ಸೆಕ್ಷನ್ ೩೩ ಪ್ರಕಾರ ಅಪರಾಧವಾಗುತ್ತದೆ.೬ತಿಂಗಳು ಜೈಲುವಾಸ ೧೦ಸಾವಿರ ದಂಡ ವಿಧಿಸಬಹುದಾಗಿದೆ.

ಮಗು ಕೇಂದ್ರೀಕೃತ ದತ್ತು ಪ್ರಕ್ರಿಯೆಯ ಆಶಯ

- ಪ್ರತಿಯೊಂದು ದತ್ತುಕೂಡ ಸಂತೋಷವಾಗಿರುವAತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಬ್ದಾರಿ
- ಪ್ರತಿಯೊಂದು ದತ್ತು ಮಗುವು ತನ್ನ ಸ್ವ-ಸಾಮರ್ಥ್ಯದಿಂದ ವ್ಯಕ್ತಿಯಾಗಿ ಬೆಳದು, ಹೆಮ್ಮೆಯಿಂದ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ಸಮಾಜದಲ್ಲಿ ಗುರುತಿಸುವಂತೆ ಬಾಳಬೇಕು
- ತನ್ನ ಜೈವಿಕ ತಂದೆ ತಾಯಿಗಳಿಂದ ತನ್ನನ್ನು ಹಾಗೆಯೇ ತೆಗೆದುಕೊಂಡು ಹೋಗದೆ ಕಾನೂನು ಬದ್ದ ದತ್ತುಗೆ ಹೋಗಿರುವೆ ಎಂದು ತಿಳಿಯುವುದು, ದತ್ತು ಮಗುವಿನ ಹಕ್ಕಾಗಿದೆ.
- ದತ್ತು ಪ್ರಕ್ರಿಯೆ ಮುಖ್ಯ ಉದ್ದೇಶ ಮಕ್ಕಳಿಲ್ಲವದರಿಗೆ ಮಕ್ಕಳನ್ನು ಒದಗಿಸುದಲ್ಲ, ಮಕ್ಕಳಿಗೆ ಪೋಷಕರನ್ನು ಒದಗಿಸುವುದಾಗಿದೆ ಎಂಬುದನ್ನು ನಾವ್ಯಾರೂ ಮರೆಯುವಂತಿಲ್ಲ.

ತೀರ್ಮಾನಗಳು :-

- ಕಾನೂನು ಬದ್ದ ದತ್ತು ಕಾರ್ಯಕ್ರಮಕ್ಕೆ ಹೆಚ್ಚು ಮಕ್ಕಳು ಬುರುವುದರಿಂದ
- ಸಂಭವನೀಯ ದತ್ತು ಪೋಷಕರು ಮಕ್ಕಳಿಗಾಗಿ ಕಾಯುವ ಅವಧಿಯು ಕಡಿಮೆಯಾದಾಗ
- ಕಾನೂನು ಬದ್ದ ದತ್ತುವಿನಲ್ಲಿ ಮಗುವಿನ ಹಕ್ಕುಗಳನ್ನು ಖಾತ್ರಿ ಪಡಿಸಿ ಕೊಳ್ಳುವುದರಿಂದ
- ದತ್ತು ಕಲ್ಪನೆ ಹೃದಯದಿಂದ ಬಂದರೆ, ದತ್ತು ಪ್ರಕ್ರಿಯೆ ಕಾನೂನು ಮೂಲಕ ನಡೆಯುತ್ತದೆ.
- ಒಂದು ವೇಳೆ ನಿಮ್ಮ ಹೃದಯ ಕಾನೂನಿನ ಬಾಹಿರವಾಗಿ ಮಗು ಪಡೆಯಲು ಆಪೇಕ್ಷ ಪಟ್ಟರೇ ಅದು ತಪ್ಪಲ್ಲ, ಆದರೆ ಕಾನೂನುನನ್ನು ಪಾಲಿಸುವಂತೆ ಬುದ್ದಿ ಒತ್ತಾಯಿಸಬೇಕು.
- ದತ್ತು ಪ್ರಕ್ರಿಯೆ ಸರಳೀಕರಣವಾಗಬೇಕು ಮತ್ತು ಜನಸ್ನೇಹಿಯಾಗಿರಬೇಕು

ಶಿಫಾರಸ್ಸುಗಳು :-

ದತ್ತು ಕಾರ್ಯಕ್ರಮವನ್ನು ಉತ್ತೇಜಿಸಲು ನೀಡಬೇಕಾದ ಮಾಹಿತಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳು

- ಕಾನೂನು ಬದ್ದ ದತ್ತು ಪ್ರಕ್ರಿಯೆ ಕುರಿತು ಪೋಷಕರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು
- ದತ್ತು ಪೋಷಕರಿಗೆ ವಿಶೇಷ ದತ್ತು ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳನ್ನು ಭೇಟಿಮಾಡಲು ಹಾಗೂ ಕಡ್ಡಾಯವಾಗಿ ಆಪ್ತ ಸಮಾಲೋಚನೆಗೆ ಒಳಗಾಗುವಂತೆ ತಿಳಿಸುವುದು
- ಜೈವಿಕ ತಾಯಿ ಮಗುವನ್ನು ಒಪ್ಪಿಸಲು ಇಚ್ಚೆಸಿದಾಗ ಮಗುವನ್ನು ಹಿಂದಕ್ಕೆ ಪಡೆಯಲು ಮನವೊಲಿಸುವುದು.
- ಒಂದು ವೇಳೆ ಒಪ್ಪದಿದ್ದಲ್ಲಿ ತಾಯಿಯನ್ನು ಮಕ್ಕಳ ಕಲ್ಯಾಣ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸಲು ತಿಳಿಸುವುದು.

ಆಸ್ಪತ್ರೆಯಲ್ಲಿ ಪರಿತ್ಯಜಿಸಿದ ಮಗು ದೊರೆತಾಗ ಕೈಗೊಳ್ಳಬೇಕಾದ ಕ್ರಮಗಳು

- ಮಗುವಿನ ವೈದ್ಯಕೀಯ ಸ್ಥಿತಿಗತಿಗಳನ್ನು ಪರಿಶೀಲಿಸಿ ಸೂಕ್ತ ವೈದ್ಯಕೀಯ ನೆರವು ನೀಡುವುದು
- ·ಮಕ್ಕಳ ಕಲ್ಯಾಣ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡುವುದು
- ಮಕ್ಕಳ ಸಹಾಯವಾಣಿ ೧೦೯೮ ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ ೧೧೨ಗೆ ಸಂಪರ್ಕಿಸಿ ಮಾಹಿತಿ ನೀಡುವುದು.
- ಪೊಲೀಸ್ ಠಾಣೆಯಲ್ಲಿ ( ಈIಖ )ಪ್ರಥಮ ವರ್ತಮಾನ ವರದಿ ದಾಖಲಿಸುವುದು
- ಸಂಬAಧಿಸಿದ ಅಧಿಕಾರಿಗಳ ವಶಕ್ಕೆ ಮಗುವನ್ನು ಹಸ್ತಾಂತರಿಸುವವರೆಗೆ ಮಗುವಿನ ಸುರಕ್ಷತೆ ಬಗ್ಗೆ ಕಾಳಜಿ ವಹಿಸುವುದು

ಅಕ್ರಮ ದತ್ತು ಹೇಗೆ ತಡೆಗಟ್ಟಬಹುದು ?

೧.ಪರಿತ್ಯಸಿದ / ಒಪ್ಪಿಸಲ್ಪಟ್ಟ ಯಾವುದೇ ಮಗುವನ್ನು ನೇರವಾಗಿ ದತ್ತು ಪಡೆಯಲು ಇಚ್ಚೆಸುವ ಕುಟುಂಬಕ್ಕೆ ನೀಡದಿರುವುದು.

೨.ಫೋನ್ ಅಥವಾ ಪೇಸ್ ಬುಕ್ ಇನ್ನಿತ್ತರ ಮಾಧ್ಯಮಗಳ ಮೂಲಕ ಸಂಪರ್ಕಿಸಿ ಮೋಸಹೋಗುವ ಜಾಲಗಳ ಬಗ್ಗೆ ಜಾಗೃತಿ ಮೂಡಿಸುವುದು.

೩.ದತ್ತು ಪಡೆಯಲು ಇಚ್ಚೆಸುವ ಪೋಷಕರೊಂದಿಗೆ ಮಗುವನ್ನು ಒಪ್ಪಿಸಲು ಬಯಸುವ ಗರ್ಭಿಣಿ ಸ್ತ್ರೀÃಯೊಂದಿಗೆ ಸಂಪರ್ಕಕ್ಕೆ ಅವಕಾಶ ಕಲ್ಪಿಸಬಾರದು

ಳ.ದತ್ತು ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆಯದ ( ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ಯಾವುದೇ ವ್ಯಕ್ತಿ/ ಕೇಂದ್ರ ಅಥವಾ ಪಾಲನಾ ಸಂರ್ಸತೆಗಳನ್ನು ಸಂಪರ್ಕಿಸಬಾರದು

ೞ.ಯಾರಾದರೂ ಅಕ್ರಮವಾಗಿ ಮಕ್ಕಳನ್ನು ದತ್ತು ತಗೆದುಕೊಂಡಲ್ಲಿ ಮಕ್ಕಳ ಸಹಾಯವಾಣಿ ೧೦೯೮ ಮತ್ತು ಪೊಲೀಸ್ ಸಹಾಯವಾಣಿ ೧೧೨ ಸಂಪರ್ಕಿಸಲು ತಿಳಿಸುವುದು.

ೠ.ಸೈಬರ್ ಕ್ರೆöÊಮ್ ಕುರಿತು ಜನರಿಗೆ ಜಾಗೃತಿ ಮೂಡಿಸುವುದು.

ಉಲ್ಲೇಖಗಳು :-

ಪರಾಮರ್ಶನ ಗ್ರಂಥಗಳು


1. ಮಕ್ಕಳ ನ್ಯಾಯ ಕಾಯ್ದೆ (ಪೋಷಣೆ ಮತ್ತು ರಕ್ಷಣೆ )-2015 , ಕರ್ನಾಟಕ ಸರ್ಕಾರ
2. **Bajpai, A, (2018) The juvenile justice (Care and Protection of children) an analysis, Indian law Review, 2(2), 191-203**
3. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸುತ್ತೋಲೆಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
4. ಮಿಷನ್ ವಾತ್ಸಲ್ಯ ಅನಿಷ್ಠಾನ ಮಾರ್ಗಸೂಚಿಗಳು (2022) ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
5. https://carings.wcd.gov.in
6. https://cara.wcd.gov.in/
7. https://icps.karnataka.gov.in
8. ಸಂಶೋಧನೆಗೆ ಒಳಪಡಿಸಿದ ಸಾಹಿತ್ಯ ಸಮೀಕ್ಷೆಗಳನ್ನು ಉಪಯೋಗಿಸಲಾಗಿದೆ.